RNU AIR DHARWAD

**MARCH 17,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

ರಾಜ್ಯದ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ನಾಳೆಯಿಂದ 20 ನೇ ತಾರೀಖಿನ ವರೆಗೆ ಬಿಸಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರ ಕರ್ನಾಟಕದ ಯಾದಗಿರಿ ಜಿಲ್ಲೆಯಲ್ಲಿ ಬಿಸಿಲ ಝಳ ಅಧಿಕವಾಗಿದ್ದು, ಜನರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ಬಿ.ಸುಶೀಲಾ ತಿಳಿಸಿದ್ದಾರೆ. ತಾಪಮಾನ ಹೆಚ್ಚಳದ ಹಿನ್ನೆಲೆಯಲ್ಲಿ ಯಲ್ಲೋ ಅಲರ್ಟ್ ಘೋಷಿಸಲಾಗಿದೆ. ಆರೋಗ್ಯ ಇಲಾಖೆ ಅಧೀನದಲ್ಲಿ, ಪ್ರತಿ ತಾಲೂಕು ಆಸ್ಪತ್ರೆಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಅವರು ಪ್ರದೇಶ ಸಮಾಚಾರಕ್ಕೆ ಮಾಹಿತಿ ನೀಡಿದ್ದಾರೆ.

<><><>

ಬೈಟ್: ಬಿ.ಸುಶೀಲಾ 39 ಸೆಕೆಂದುಗಳು

<><><>

ಎಫ್.ಎ.ಕ್ಯೂ ಗುಣಮಟ್ಟದ ಕುಸುಬೆ ಉತ್ಪನ್ನವನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ, ರೈತರಿಂದ ಖರೀದಿಸಲು ಬೀದರ್ ಜಿಲ್ಲೆಯಲ್ಲಿ ಒಟ್ಟು 9 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದ್ದಾರೆ. 2024-25 ನೇ ಸಾಲಿನಲ್ಲಿ ಭಾರತ ಸರ್ಕಾರ ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ, ಪ್ರತಿ ಕ್ವಿಂಟಾಲ್ ಗೆ 5 ಸಾವಿರದ 940 ರೂಪಾಯಿ ದರದಲ್ಲಿ ಕುಸುಬೆ ಉತ್ಪನ್ನ ಖರೀದಿಸಲು, ಕರ್ನಾಟಕ ಸಹಕಾರ ಎಣ್ಣೇ ಬೀಜ ಬೆಳೆಗಾರರ ಮಹಾ ಮಂಡಳ ನಿಯಮಿತ ಸಂಸ್ಥೆಯನ್ನು ನೇಮಿಸಿ ರಾಜ್ಯ ಸರ್ಕಾರವು ಆದೇಶಿಸಿದೆ ಎಂದು ಅವರು ತಿಳಿಸಿದರು.

<><><>

ಸಿದ್ದರಾಮಯ್ಯ ನೇತೃತ್ವದ, ಕಾಂಗ್ರೆಸ್ ಸರ್ಕಾರ, ಇತ್ತೀಚೆಗೆ ಮಂಡಿಸಿದ ಆಯವ್ಯಯದಲ್ಲಿ, ಕಾಮಗಾರಿಗಳ ಗುತ್ತಿಗೆ ವಹಿಸಲು, ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ, ಪ್ರತಿಶತ 4 ರ ಷ್ಟ ಮೀಸಲು ಕಲ್ಪಿಸಿರುವುದು, ಸಂವಿಧಾನ ಬಾಹಿರ ಎಂದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ. ಬೆಳಗಾವಿಯ ಸಾಂಬ್ರಾ ವಿಮಾನ ಇಲ್ದಾಣದಲ್ಲಿ, ಮಾತನಾಡಿದ

ಅವರು, ಧರ್ಮದ ಹೆಸರಿನಲ್ಲಿ ಮೀಸಲಾತಿ ಕಲ್ಪಿಸಲು ಸಂವಿಧಾನ ಅವಕಾಶ ನೀಡಿಲ್ಲ. ಸರ್ಕಾರದ ಅಸಾಂವಿಧಾನಿಕ ನಿರ್ಧಾರವನ್ನು ಬಿಜೆಪಿ ಖಂಡಿಸಿ, ರಾಜ್ಯಾದ್ಯಂತ ಪ್ರತಿಭಟಿಸಲಿದೆ ಎಂದರು.

<><><>

ವರಕವಿ ದ.ರಾ. ಬೇಂದ್ರೆಯವರ ಕೃತಿಗಳಲ್ಲಿ, ಬದುಕಿನ ಸಂವೇದನೆಗಳು ಹಾಸುಹೊಕ್ಕಾಗಿದ್ದು, ಜನ ಸಾಮಾನ್ಯರಿಗೆ ಬೇಂದ್ರೆಯವರ ಕೃತಿಗಳು ತಲುಪಬೇಕಿದೆ ಎಂದು, ಅಖಿಲ ಭಾರತೀಯ ಸಾಹಿತ್ಯ ಪರಿ 'ದ್, ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಂ.ಎಸ್. ನರಸಿಂಹಮೂರ್ತಿ ಅಭಿಪ್ರಾಯಪಟ್ಟಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ ಆಯೋಜಿಸಿದ್ದ, ಕವಿ ಬೇಂದ್ರೆಯವರ ನಾಕುತಂತಿ 'ಸ್ಫೂರ್ತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಸಾಹಿತಿ ಜಿ.ಬಿ.ಹರೀಶ ಮಾತನಾಡಿ, ಬೇಂದ್ರೆಯವರ ನಾಕುತಂತಿ ಕೃತಿಯಲ್ಲಿ, ಜ್ಞಾನ, ಸಂಸ್ಕೃತಿ, ಅಧ್ಯಾತ್ಮ, ಕನ್ನಡ ಪ್ರೇಮ ಮತ್ತು ಬದುಕಿನ ಮೌಲ್ಯಗಳು ಮೇಳೈಸಿವೆ ಎಂದರು.

<><><>

ಇಂದು ಡಿ.ವಿ.ಜಿ ಕಾವ್ಯನಾಮದಿಂದ ಖ್ಯಾತರಾದ ಕವಿ, ವಿದ್ವಾಂಸ, ಮಂಕುತಿಮ್ಮ ಕಗ್ಗವನ್ನು ರಚಿಸಿದ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರ ಜನ್ಮ ದಿನ. ಆಧುನಿಕ ಸರ್ವಜ್ಞರೆಂದೇ ಖ್ಯಾತರಾದ ಡಿ.ವಿ. ಗುಂಡಪ್ಪನವರ ಸಾಹಿತ್ಯ ಸೇವೆಯನ್ನು ಸ್ಮರಿಸಿರುವ ಗಣ್ಯರು, ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ.

<><><>

ರಾಷ್ಟ್ರೀಯ ಲೋಕ ಅದಾಲತ್ ಮೂಲಕ ಬೀದರ್ ಜಿಲ್ಲೆಯಲ್ಲಿ ಒಟ್ಟು **52** ಸಾವಿರದ **812** ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು, **28** ಕೋಟಿ **03** ಲಕ್ಷದ **91** ಸಾವಿರದ **766** ರೂಪಾಯಿ ಪರಿಹಾರವನ್ನು ಕಕ್ಷಿದಾರರಿಗೆ ಒದಗಿಸಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಕಾಶ ಬನಸೋಡೆ ತಿಳಿಸಿದ್ದಾರೆ.

<><><>

ಆಕಾಶವಾಣಿಯ ಬಹುಶ್ರುತ ಕಾರ್ಯಕ್ರಮ, 'ಮನ್ ಕಿ ಬಾತ್' ಮೂಲಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇದೇ **30**, ಭಾನುವಾರದಂದು, ಬೆಳಗ್ಗೆ **11** ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಮಾತನಾಡಲಿದ್ದಾರೆ. ಇದು ಮನದ ಮಾತಿನ **120**ನೇ ಸಂಚಿಕೆಯಾಗಿದೆ. ಸಾರ್ವಜನಿಕರು ತಮ್ಮ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು, "ಮೈ ಜಿ.ಒ.ವಿ. ಓಪನ್ ಫೋರ್ಂ", "ನಮೋ ಆ್ಯಪ್" ಅಥವಾ ಉಚಿತ ಸಹಾಯವಾಣಿ ಸಂಖ್ಯೆ **1800-11-7800** ಮೂಲಕ ಹಂಚಿಕೊಳ್ಳಬಹುದು.

<><><>

ಗದಗ ಜಿಲ್ಲೆ, ಹುಲಕೋಟಿಯಲ್ಲಿ ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯ, ನವೀಕೃತ ಶಾಲಾ ಕಟ್ಟಡವನ್ನು, ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಉದ್ಘಾಟಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ **1** ಗಂಟೆ **10** ನಿಮಿಷಕ್ಕೆ.